**ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**
**ಸಿ.ಸಿ. ನಂ. 900/2020**

**ಚಾ.ಸಾ. - 1**
**ಪ್ರಾ.ಸಾ. - 1**

**ಪ್ರಮಾಣ ವಚನ ಮಾಡಿದ ದಿನಾಂಕ : 13-09-2022**

ದಿಃ 26.7.2022 ರಂದು ಆದ ಆದೇಶದಂತೆ ಪಿಡಬ್ಲ್ಯು-1 ರವರ ಪಾಟೀ ಸವಾಲನ್ನು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಎಮಎಸಬಿ ರವರಿಂದ**

ನಾನು ದ್ವಿತಿಯ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ದಿಃ 17.4.2020 ರಂದು ದೂರನ್ನು ನೀಡಿರುತ್ತೇನೆ. ನಾನು ದೂರನ್ನು ನೀಡುವಾಗ ರಾತ್ರಿ 10.30 -11.00 ಗಂಟೆಯಾಗಿರುತ್ತದೆ. ನಾನು ಆ ದಿನ ಪೊಲೀಸಠಾಣೆಯಲ್ಲಿ ಒಂದು ಗಂಟೆಗಳ ಕಾಲ ಇದ್ದೆನು. ನನ್ನ ಜೊತೆ ದೂರನ್ನು ಕೊಡಲು ಚಾಸಾ-2 ಮತ್ತು ಚಾಸಾ-8 ರವರು ಬಂದಿದ್ದರು. ನಿಪಿ-1 ನ್ನು ಪೊಲೀಸರು ಹೇಳಿದ ಪ್ರಕಾರ ಬರೆದಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ನ್ನು ಚಾಸಾ-8 ರವರು ಬರೆದಿರುತ್ತಾರೆ. ನಾನು ಪೊಲೀಸರಿಗೆ ಮರು ಹೇಳಿಕೆಯನ್ನು ನೀಡಿರುತ್ತೇನೆ. ಪೊಲೀಸರು ಹೇಳಿದ ಪ್ರಕಾರ ನಿಪಿ-1 ನ್ನು ಬರೆದಿದ್ದರೂ ನಾನು ಹೇಳಿದ ಪ್ರಕಾರ ನಿಪಿ-1 ನ್ನು ಬರೆದಿರುತ್ತಾರೆ ಎಂದು ಸಂಪೂರ್ಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.ನಾನು ಮರು ಹೇಳಿಕೆಯನ್ನು ದಿಃ18.4.2020 ರಲ್ಲಿ ನೀಡಿರುತ್ತೇನೆ. ಮರುಹೇಳಿಕೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಮರು ಹೇಳಿಕೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಹಾಗೂ ನಾನು ಅದನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಿಃ 18.4.2020 ರಂದು ಮರುಹೇಳಿಕೆಯನ್ನು ನೀಡಿರುವುದು ಸುಳ್ಳು ಎಂದರೆ ಸರಿಯಲ್ಲ.

ಚಾಸಾ-2 ನನ್ನ ಮಾವ ಎಂದರೆ ಸರಿ. ಚಾಸಾ-2 ರವರಿಗೆ ನನ್ನ ತಂಗಿಯನ್ನು ಮದುವೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಚಾಸಾ-3 ರವರು ನನ್ನ ಸಂಬಂದಿಕರು ಎಂದರೆ ಸರಿ. ಚಾಸಾ-4 ಮತ್ತು 7 ರವರು ನನ್ನ ಸಂಬಂದಿಕರು ಎಂದರೆ ಸರಿಯಲ್ಲ. ಚಾಸಾ -4 ಮತ್ತು 7 ರವರು ನನ್ನ ಸಂಬಂದಿಕರು ಇದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ಮತ್ತು 7 ರವರ ಮನೆಯು ನಮ್ಮ ಓಣಿಯನ್ನು ಬಿಟ್ಟು ಬೇರೆ ಓಣಿಯಲ್ಲಿದೆ ಎಂದರೆ ಸರಿ. ಚಾಸಾ-5 ಇವರು ನಮ್ಮ ಸಂಬಂದಿಕರು ಎಂದರೆ ಸರಿ. ಚಾಸಾ-5 ರವರ ಮನೆ ನದಾಫ ಓಣಿಯಲ್ಲಿದೆ ಎಂದರೆ ಸರಿ. ಚಾಸಾ-6 ನನ್ನ ಸಹೋದರ ಎಂದರೆ ಸರಿ. ಚಾಸಾ-8 ನನ್ನ ಮಾವ ಎಂದರೆ ಸರಿ. ಚಾಸಾ-9 ರವರು ನನ್ನ ಚಿಕ್ಕಪ್ಪನ ಮಗ ಎಂದರೆ ಸರಿ. ಚಾಸಾ-9 ರವರ ಮನೆ ನಮ್ಮ ಮನೆಯಿಂದ ದೂರ ಇದೆ ಎಂದರೆ ಸರಿಯಲ್ಲ. ಚಾಸಾ-9 ರವರ ಮನೆಯು ದೂರ ಇದ್ದರೂ ಇಲ್ಲ

ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ನಾನು, ನನ್ನ ತಂದೆ - ತಾಯಿ ಹಾಗೂ ನನ್ನ ಸಹೋದರ - ಸಹೋದರಿಯರು ಇರುತ್ತೇವೆ. ನಾವು ಇರುವಂತಹ ಓಣಿಯು ಗೌಂಟರ ಓಣಿಯಲ್ಲಿರುತ್ತದೆ ಎಂದರೆ ಸರಿ. ಆರೋಪಿತರ ಮನಗಳು ಮಸೀದಿ ಓಣಿಯಲ್ಲಿವೆ ಎಂದರೆ ಸರಿ. ನಮ್ಮ ಓಣಿಯಲ್ಲಿ ಬೇರೆ ಬೇರೆ ಮನೆತನದವರ ಮನೆಗಳು ಇದ್ದಾವೆ ಎಂದರೆ ಸರಿ. ನಮ್ಮ ಮನೆಯ ಎದುರುಗಡೆ ಕುತುಬಸಾಬ ಹೊಸೂರು ಇವರ ಮನೆ ಇದೆ ಎಂದರೆ ಸರಿಯಲ್ಲ. ಕುತುಬಸಾಬ ಹೊಸೂರು ಇವರ ಮನೆ ನಮ್ಮ ಮನೆಯ ಎದುರುಗಡೆ ಇದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪಕ್ಕ ಮಜೀದ ಕುಂದರಗಿ ಇವರ ಮನೆ ಇದೆ ಎಂದರೆ ಸರಿ. ನಮ್ಮ ಮನೆಯ ಎಡಕ್ಕೆ ಸಂಗಪ್ಪ ಕುರುಬನಟ್ಟಿ ಇವರ ಮನೆ ಇದೆ ಎಂದರೆ ಸರಿ. ನಮ್ಮ ಮನೆಯ ಪಕ್ಕದಲ್ಲಿ ನೀಲಮ್ಮ ಗಟ್ಟಿಮನಿ, ಮಲ್ಲವ್ವ ಇಳಿಗೇರ ಮತ್ತು ರಮೇಶ ಬೆಣ್ಣಿ ಹಾಗೂ ಮಕ್ತುಂಬಿ ಕುಂದರಗಿ ಇವರ ಮನೆಗಳು ಇವೆ ಎಂದರೆ ಸರಿ. ಸವಟಗಿ ಗ್ರಾಮದಲ್ಲಿ ನಮ್ಮ ಮನೆತನಕ್ಕೆ ಸಂಬಂದಿಸಿದಂತೆ 15 ಮನೆತನಗಳು ಇವೆ ಎಂದರೆ ಸರಿ. ನಮ್ಮ ಊರನಲ್ಲಿ ನಮ್ಮ ಸಂಬಂದಿಕರು ಒಟ್ಟು 70 ರಿಂದ 80 ಜನ ಇರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು 60 ಜನರು ಇರುತ್ತಾರೆ ಎಂದು ನುಡಿಯುತ್ತಾರೆ. ನಾವು ನಮ್ಮ ಊರಿನಲ್ಲಿ ರಾಜಕೀಯವಾಗಿ ಪ್ರಭಾವಿ ಇರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಅಜ್ಜ ಇವರು ಪಂಚಾಯತಿ ಚುನಾವಣೆಯಲ್ಲಿ ಸ್ಪರ್ದಿಸಿರುತ್ತಾರೆ.

ನಾನು ಈಗ ವ್ಯವಸಾಯವನ್ನು ಮಾಡುತ್ತೇನೆ. ಸಾಕ್ಷಿಯು ಮುಂದುವರೆದು ಜಗಳಕ್ಕೂ ಮೊದಲು ಒಂದು ಖಾಸಗಿ ಕಂಪನಿಯಲ್ಲಿ ನೌಕರಿ ಮಾಡುತ್ತಿದ್ದೆನು. ನಾನು ದೂರನ್ನು ನೀಡುವಾಗ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆನು. ನಮ್ಮ ಮತ್ತು ಆರೋಪಿತರ ಜಮೀನು ಅಕ್ಕ ಪಕ್ಕದಲ್ಲಿ ಇವೆ ಎಂದರೆ ಸರಿ. ನಮ್ಮ ಹೊಲಕ್ಕೆ ಹೋಗಬೇಕಾದರೆ ಆರೋಪಿತರ ಹೊಲವನ್ನು ದಾಟಿ ಹೋಗಬೇಕಾಗುತ್ತದೆ ಎಂದರೆ ಸರಿ. ನಮ್ಮ ಹೊಲದ ದಂಡೆಗೆ ಸಾಗವಾನಿ ಗಿಡ ಬೆಳೆದಿರುತ್ತೇವೆ ಎಂದರೆ ಸರಿ. ನಮ್ಮ ಹೊಲದಲ್ಲಿ ಇದ್ದ ಗಿಡಗಳ ನೆರಳಿನಿಂದ ಆರೋಪಿತರ ಹೊಲದಲ್ಲಿ ಬೆಳೆಗಳು ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಗಿಡಗಳ ಬೇರು ಆರೋಪಿತರ ಹೊಲಕ್ಕೆ ಹೋಗಿರುತ್ತವೆ ಮತ್ತು ಆ ಬೇರಿನಿಂದ ಆರೋಪಿತರ ಹೊಲದಲ್ಲಿ ಬೆಳೆಗಳು ಬರುತ್ತಿಲ್ಲ ಎಂದರೆ ಸರಿಯಲ್ಲ. ನಮ್ಮ ಗಿಡಗಳಿಂದ ಬಿದ್ದ ಎಲೆಗಳಿಂದ ಆರೋಪಿತರಿಗೆ ಸಾಕಷ್ಟು ನಷ್ಟವಾಗಿದೆ ಎಂದರೆ ಸರಿಯಲ್ಲ. ನಾನು ದೂರನ್ನು ಕೊಡವ ಪೂರ್ವದಲ್ಲಿ ಆರೋಪಿತರು ಸದರಿ ಗಿಡಗಳನ್ನು ಕಟಾವುಮಾಡಿ ಎಂದು ಸಾಕಷ್ಟು ಬಾರಿ ನಮ್ಮ ಹತ್ತಿರ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಗಿಡಗಳನ್ನು ತೆಗೆಯುವ ಸಲುವಾಗಿ ನಮಗೂ ಮತ್ತು ಆರೋಪಿತರಿಗೂ ಮಾತಿನ ಚಕಮಕಿ ಆಗಿರುತ್ತದೆ ಎಂದರೆ ಸರಿಯಲ್ಲ. ಮೇಲಿಂದಮೇಲೆ ಗಿಡಗಳನ್ನು ತೆಗೆಯಿರಿ ಎಂದು ಹೇಳಿದರೆ ಆರೋಪಿತರ ಮೇಲೆ ದೂರನ್ನು ನೀಡುತ್ತೇವೆ ಎಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಷಯದ ಸಂಬಂದ ನಮಗೂ ಮತ್ತು ಆರೋಪಿತರಿಗೂ ಮನಾಸ ಮನಸಾ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ.

ನಮಗೂ ಮತ್ತು ಆರೋಪಿತರಿಗೂ ಮನಸಾ ಮನಸಾ ಸರಿ ಇಲ್ಲದೇ ಇದ್ದರೂ ಸರಿ ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1, 3, 7 ಮತ್ತು 8 ನೇ ಆರೋಪಿತರು ವಿದ್ಯಾಭ್ಯಾಸವನ್ನು ಮಾಡಿರುತ್ತಾರೆ ಎಂದರೆ ಸರಿ. ಸದರಿ ಆರೋಪಿತರಿಗೆ ಸಾಗವಾನಿ ಗಿಡಗಳನ್ನು ಕಟಾವು ಮಾಡಲು ಹೇಳಿದರೆ ನೀವು ನೌಕರಿಗೆ ಹೋಗದಂತೆ ನಿಮ್ಮ ಮೇಲೆ ದೂರನ್ನು ಮಾಡುತ್ತೇವೆ ಎಂದು ಬೆದರಿಕೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ದಿಃ17.4.2020 ರಂದು ಮಧ್ಯಾಹ್ನ 12.00 ಗಂಟೆ ಸುಮಾರಿಗೆ ನಾನು ಹೊಲಕ್ಕೆ ಹೋಗುತ್ತಿದ್ದಾಗ 1 ನೇಆರೋಪಿಯು ಎದುರುಗಡೆಯಿಂದ ಬಂದು ಜಗಳ ತೆಗೆದಾಗ ಸುಮಾರು 4 ರಿಂದ 5 ಜನ ಕೂಡಿರುತ್ತಾರೆ. ಜಗಳ ಆಗುವಾಗ ಇದ್ದ ನಾಲ್ಕೈದು ಜನರ ಹೆಸರನ್ನು ನಿಪಿ-1 ರಲ್ಲಿ ಬರೆಯಿಸಿರುವುದಿಲ್ಲ. ಸದರಿ ನಾಲ್ಕೈದು ಜನರ ಹೆಸರನ್ನು ನಿಪಿ-1 ರಲ್ಲಿ ಬರೆಯಿಸುವುದಕ್ಕೆ ತೊಂದರೆ ಇರಲಿಲ್ಲ. 1 ನೇಆರೋಪಿಯ ಹತ್ತಿರ ಮೊಟರಸೈಕಲ ಇರುವುದಿಲ್ಲ ಮತ್ತು ಆತನಿಗೆ ಮೊಟರಸೈಕಲನ್ನು ಚಲಾಯಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಮಧ್ಯಾಹ್ನ 12.00 ಗಂಟೆಗೆ ನಾನು ಹೊಲಕ್ಕೆ ಹೋಗುತ್ತಿದ್ದಾಗ 1 ನೇ ಆರೋಪಿಯು ಎದುರಿನಿಂದ ತನ್ನ ಮೊಟರಸೈಕಲನ್ನು ತೆಗೆದುಕೊಂಡು ನನ್ನ ಮೇಲೆ ಬಂದಾಗ ನನ್ನ ಮತ್ತು ಆತನ ನಡುವೆ ಬಾಯಿ ಮಾತಿನ ಜಗಳ ಆಗಿರುತ್ತದೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಊರಿನಲ್ಲಿ ಯಾವುದೇ ಒಂದು ಘಟನೆ ಸಂಬಂವಿಸಿದರೆ ಸಾಕಷ್ಟು ಜನ ಸೇರುತ್ತಾರೆ ಎಂದರೆ ಸರಿ. ಆರೋಪಿತರು ಬಡಿಗೆ ಸಮೇತ ನಮ್ಮ ಮನೆಗೆ ಬಂದಿರುತ್ತಾರೆ ಎಂದು ನಿಪಿ-1 ರಲ್ಲಿ ಬರೆಯಿಸಿರುತ್ತೇನೆ. ನಾನು ಆರೋಪಿತರು ಬಡಿಗೆ ಸಮೇತ ಬಂದಿರುತ್ತಾರೆ ಎಂದು ನಿಪಿ-1 ರಲ್ಲಿ ಬರೆಯಿಸದೇ ಇದ್ದರೂ ಬರೆಯಿಸಿರುತ್ತೇನೆ ಎಂದು ನ್ಯಾಯಾಲಯದ ಮುಂದೆ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಘಟನೆಯು ಆದಾಗ 20 ರಿಂದ 30 ಜನ ಕೂಡಿರುತ್ತಾರೆ. ಆ 20 ರಿಂದ 30 ಜನರ ಹೆಸರನ್ನು ನನಗೆ ಹೇಳಲು ಬರುವುದಿಲ್ಲ. ಘಟನೆ ನಡೆಯುವಾಗ 20 ರಿಂದ 30 ಜನ ಕೂಡಿದ್ದರು ಎಂದು ನಿಪಿ-1 ರಲ್ಲಿ ಬರೆಯಿಸಿರುವುದಿಲ್ಲ. 20 ರಿಂದ 30 ಜನ ಕೂಡಿದ್ದರು ಎಂದು ನಿಪಿ-1 ರಲ್ಲಿ ಬರೆಯಿಸುವುದಕ್ಕೆ ತೊಂದರೆ ಇರಲಿಲ್ಲ. 1 ನೇ ಆರೋಪಿಯು ಬಡಿಗೆಯಿಂದ ನನ್ನ ತಲೆಯ ಹಿಂಬಾಗಕ್ಕೆ ಹೊಡೆದು ಗಾಯಪಡಿಸಿರುತ್ತಾನೆ ಎಂದು ನಿಪಿ-1 ರಲ್ಲಿ ಬರೆಯಿಸಿರುತ್ತೇನೆ. ಆರೋಪಿತರು ನನಗೆ ಬೊಸುಡಿ ಮಗನೇ ಎಂದು ಬೈಯ್ದಿರುವುದನ್ನು ನಿಪಿ-1 ರಲ್ಲಿ ಬರೆಯಿಸಿರುತ್ತೇನೆ. 5 ಮತ್ತು 6 ನೇ ಆರೋಪಿತರು ಕೈಯಿಂದ ನನಗೆ ಹೊಡೆ ಬಡೆ ಮಾಡಿರುತ್ತಾರೆ ಎನ್ನುವವುದನ್ನು ನಿಪಿ-1 ರಲ್ಲಿ ಬರೆಯಿಸಿರುವುದಿಲ್ಲ. ಜಗಳವನ್ನು ಚಾಸಾ-9 ರವರು ಬಿಡಿಸಲು ಬಂದಾಗ 2 ನೇ ಆರೋಪಿಯು ಬಡಿಗೆಯಿಂದ ಅವರ ತಲೆಗೆ ಹೊಡೆದು ಗಾಯಪಡಿಸಿರುತ್ತಾನೆ ಎಂದು ನಿಪಿ-1 ರಲ್ಲಿ ಬರೆಯಿಸಿರುತ್ತೇನೆ. ಘಟನೆಯಾದಾಗ ನಮ್ಮ ತಲೆಯಲ್ಲಿ ರಕ್ತ ಬಂದು ಬಟ್ಟೆಗಳಿಗೆ ಆಗಿರುತ್ತದೆ. ರಕ್ತ ಹತ್ತಿದ ಬಟ್ಟೆಗಳನ್ನು ಪೊಲೀಸರಿಗೆ ನಾವು ನೀಡಿರುವುದಿಲ್ಲ. ಸದರಿ ರಕ್ತ ಹತ್ತಿದ ಬಟ್ಟೆಗಳನ್ನು ಪೊಲೀಸರಿಗೆ ನೀಡಲು ನಮಗೆ ತೊಂದರೆ ಇರಲಿಲ್ಲ. ನಾವು ಘಟನೆಯಾದಾಗ ನೇರವಾಗಿ ಬೆಳವಡಿಯಲ್ಲಿರುವ ಸರ್ಕಾರಿ ಆಸ್ಪತ್ರೆಗೆ ರಾತ್ರಿ 8.30 ಗಂಟೆಗೆ ಹೋಗಿರುತ್ತೇವೆ. ಸದರಿ ಆಸ್ಪತ್ರೆಯಲ್ಲಿ

ನಾನು ಒಂದುದಿನ ಪೂರ್ತಿಯಾಗಿ ಇರುತ್ತೇನೆ. ನಾನು ಬೈಲಹೊಂಗಲ ಸರ್ಕಾರಿ ಆಸ್ಪತ್ರೆಗೆಹೋದಾಗ ಮಾರನೇ ದಿನ ಬೆಳಿಗ್ಗೆ 11.00 ರಿಂದ 11.30 ಗಂಟೆಯಾಗಿರುತ್ತದೆ. ನಾವು ವೈದ್ಯರಿಗೆ ಹಲ್ಲೆಯಾಗಿದೆ ಎಂದು ಸುಳ್ಳು ಹೇಳಿ ಬರೆಯಿಸಿರುತ್ತೇವೆ ಎಂದರೆ ಸರಿಯಲ್ಲ.

ರಾತ್ರಿ 7.00 ಗಂಟೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ ಆರೋಪಿತರೆಲ್ಲರೂ ಕೂಡಿಕೊಂಡು ನಮ್ಮ ಮನೆಗೆ ಬಂದು ಮಧ್ಯಾಹ್ನ ನಡೆದ ಘಟನೆಯ ಸಿಟ್ಟಿನಿಂದ ಜಗಳ ತೆಗೆದಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. 5 ನೇ ಆರೋಪಿಯು ನನ್ನನನ್ನು ಅಡ್ಡ ಗಟ್ಟಿ ಹಿಡಿದಿರುತ್ತಾನೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. 1 ನೇ ಆರೋಪಿಯು ಬಡಿಗೆಯಿಂದ ನನ್ನ ತಲೆ ಹಿಂಬಾಗಕ್ಕೆ ಹೊಡೆದು ಗಾಯಪಡಿಸಿರುತ್ತಾನೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. 3 ನೇಆರೋಪಿಯು ಬೋಸುಡಿ ಮಗನೆ ಎಂದು ಅವ್ಯಾಚ್ಯ ಶಬ್ದಗಳಿಂದ ಬೈಯ್ದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು 5 ನೇ ಆರೋಪಿಯು ನನಗೆ ಕೈಯಿಂದ ಹೊಡೆ ಬಡಿ ಮಾಡಿರುತ್ತಾರೆ ಆದರೆ 6 ನೇ ಆರೋಪಿಯು ನನಗೆ ಕೈಯಿಂದ ಹೆಡೆ ಬಡಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. 5 ನೇ ಆರೋಪಿಯು ನನಗೆ ಕೈಯಿಂದ ಹೊಡೆ ಬಡೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ -9 ರವರು ಬಿಡಿಸಲು ಬಂದಾಗ ಬಡಿಗೆಯಿಂದ ಅವರ ತಲೆಗೆ ಹೊಡೆದು ಗಾಯಪಡಿಸಿರುತ್ತಾನೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಚಾಸಾ-10 ರವರುಜಗಳ ಬಿಡಿಸಲು ಬಂದಾಗ 7 ನೇಆರೋಪಿಯು ಬಡಿಗೆಯಿಂದ ಎಡಗೈ ಬುಜ ಮತ್ತು ಎಡಗೈ ಮೊಣಕೈ ಗೆ ಹೊಡೆದು ಗಾಯಪಡಿಸಿರುತ್ತಾನೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಸದರಿ ಜಗಳವನ್ನು ಚಾಸಾ-4 ರಿಂದ 7 ರವರು ಬಿಡಿಸಿರುತ್ತಾರೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ಸೇರಿ ಇನ್ನೊಮ್ಮೆ ಸಿಕ್ಕರೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ ಬಡಿಗೆಗಳನ್ನು ಅಲ್ಲಿಯೇ ಎಸೆದು ಹೋಗಿರುತ್ತಾರೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ 3 ಬಡಿಗೆಗಳನ್ನು ವಶಕ್ಕೆ ತೆಗೆದುಕೊಂಡರು ಹಾಗೂ ಪೋಟೋಗಳನ್ನು ತೆಗೆದಿರುತ್ತಾರೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಪೋಟೋಗಳನ್ನು ಬೆರೆಕಡೆ ತೆಗೆದುಕೊಂಡಿರುತ್ತಾರೆ ಹೋರತು ನಮ್ಮ ಮನೆಯ ಹತ್ತಿರ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮೂಮಾ1 ರಿಂದ 3 ಎಲ್ಲ ರೈತರ ಮನೆಯಲ್ಲಿ ಸಿಗುತ್ತವೆ ಎಂದರೆ ಸರಿ. ಮೂಮಾ 1 ರಿಂದ 3 ನ್ನು ನಾವೇ ಪೊಲೀಸಠಾಣೆಗೆ ಹೋಗಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ಆರೋಪಿಗಳಿಂದ ಜರುಗಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮೇಲೆ ಹಳೆಯ ವೈಶಮ್ಯ ಇದ್ದುದರಿಂದ ಚಕ್ಕಡಿಯ ಮೇಲೆ ಬಿದ್ದಿದ್ದನ್ನೇ ನೆಪ ಮಾಡಿಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ನ್ನು ನಮಗೆ ಬೇಕಾದ ಹಾಗೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ